# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 930 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 15.12.2025 |
| ಉತ್ತರಿಸಬೇಕಾದ ಸಚಿವರು | : | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಅಂದಾಜು 7.2 ಲಕ್ಷ ಮಕ್ಕಳು ಅಧಿಕ ರಕ್ತದೊತ್ತಡದಿಂದ ಬಳಲುತ್ತಿರುವ ಅಂಶ ಸರ್ಕಾರದ ಗಮನಕ್ಕೆ ಬಂದಿದೆಯೇ; | ಆರೋಗ್ಯ ಇಲಾಖೆಯ ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮದಡಿ ಸರ್ಕಾರಿ ಮತ್ತು ಸರ್ಕಾರಿ ಅನುದಾನಿತ ಶಾಲಾ ಕಾಲೇಜುಗಳಲ್ಲಿ 1 ರಿಂದ 12ನೇ ತರಗತಿಯವರೆಗೆ ವ್ಯಾಸಂಗ ಮಾಡುತ್ತಿರುವ ಮಕ್ಕಳಿಗೆ ಆರ್.ಬಿ.ಎಸ್.ಕೆ ತಂಡಗಳ ಮುಖಾಂತರ ಉಚಿತವಾಗಿ ಮಕ್ಕಳ ಆರೋಗ್ಯ ತಪಾಸಣೆ ಚಟುವಟಿಕೆಯನ್ನು ನಡೆಸಲಾಗುತ್ತದೆ. 2025-26 ನೇ ಸಾಲಿಗೆ (ಏಪ್ರಿಲ್ ತಿಂಗಳಿನಿಂದ ನವೆಂಬರ್ ವರೆಗೆ) ಒಟ್ಟು 4627368 ಮಕ್ಕಳಿಗೆ ಆರೋಗ್ಯ ತಪಾಸಣೆಯನ್ನು ನಡೆಸಲಾಗಿದ್ದು, ಅದರಲ್ಲಿ 577260 ಮಕ್ಕಳು ಅಧಿಕ ರಕ್ತದೊತ್ತಡದಿಂದ ಬಳಲುತ್ತಿದ್ದಾರೆ. ಅಧಿಕ ರಕ್ತದೊತ್ತಡದಿಂದ ಬಳಲುತ್ತಿರುವ ಮಾಹಿತಿಯನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ. |
| ಆ) | ಮಕ್ಕಳಲ್ಲಿ ಜಾಗೃತಿ ಮೂಡಿಸಿ ಭವಿಷ್ಯದಲ್ಲಿ ಗಂಭೀರ ಆರೋಗ್ಯ ಸಮಸ್ಯೆಗಳಿಗೆ ಈಡಾಗದ ಹಾಗೆ ತಡೆಯುವ ನಿಟ್ಟಿನಲ್ಲಿ ಸರ್ಕಾರ ಕೈಗೊಳ್ಳಬಹುದಾದ ಕ್ರಮಗಳೇನು; | ಆರ್.ಬಿ.ಎಸ್.ಕೆ ಮೊಬೈಲ್ ಹೆಲ್ತ್ ತಂಡಗಳು ಮಕ್ಕಳ ಆರೋಗ್ಯ ತಪಾಸಣೆಗಾಗಿ ಶಾಲಾ ಕಾಲೇಜುಗಳಿಗೆ ಭೇಟಿ ನೀಡಿದ ಸಮಯದಲ್ಲಿ ದೈಹಿಕ ಆರೋಗ್ಯ, ಮಾನಸಿಕ ಆರೋಗ್ಯ, ವೈಯಕ್ತಿಕ ಶುಚಿತ್ವ ಹಾಗೂ ಹದಿಹರೆಯದ ಆರೋಗ್ಯ, ಸಮಸ್ಯೆಗಳ ಕುರಿತಾಗಿ ಮಕ್ಕಳಿಗೆ ಆರೋಗ್ಯ ತಪಾಸಣೆ ಹಾಗೂ ಶಿಕ್ಷಣವನ್ನು ನೀಡುತ್ತಾರೆ.<br><br>ರಾಜ್ಯದ 25 ಜಿಲ್ಲೆಗಳಲ್ಲಿ ರಾಷ್ಟ್ರೀಯ ಕಿಶೋರ ಸ್ವಾಸ್ಥ್ಯ ಕಾರ್ಯಕ್ರಮ ಸಮಾಲೋಚಕರು ಈ ಕೆಳಕಂಡ ವಿಷಯಗಳ ಬಗ್ಗೆ ಹದಿಹರೆಯ ಮಕ್ಕಳಿಗೆ ಅರಿವು ಮೂಡಿಸುತ್ತಾರೆ.<br><br>1.ಪೌಷ್ಟಿಕಾಂಶ ಸುಧಾರಣೆ,<br>2.ಲೈಂಗಿಕತೆ ಮತ್ತು ಸಂತಾನೋತ್ಪತ್ತಿ ಆರೋಗ್ಯ ವರ್ಧನೆ,<br>3.ಮಾನಸಿಕ ಆರೋಗ್ಯ ವರ್ಧನೆ,<br>4.ಗಾಯಗಳು ಮತ್ತು ಹಿಂಸೆಯನ್ನು ತಡೆಗಟ್ಟುವುದು (ಲಿಂಗ ಆಧಾರಿತ ಹಿಂಸೆ ಸೇರಿದಂತೆ)<br>5.ಮಾದಕ ವಸ್ತುಗಳು ಹಾಗೂ ದುಷ್ಚಟಗಳ ವ್ಯಸನವನ್ನು ತಡೆಗಟ್ಟುವುದು, ಅಸಾಂಕ್ರಾಮಿಕ(NCDs) ರೋಗಗಳನ್ನು ತಡೆಗಟ್ಟುವುದು. |

| | | |
|---|---|---|
| ಇ) | ಇಂತಹ ಗಂಭೀರ ಆರೋಗ್ಯ ವಿಚಾರಗಳನ್ನು ಮಕ್ಕಳ ಪಠ್ಯ ಪುಸ್ತಕದಲ್ಲಿ ಸೇರ್ಪಡೆಗೊಳಿಸುವ ಬಗ್ಗೆ ಸರ್ಕಾರ ಕ್ರಮ ವಹಿಸುವುದೇ? | ಶಾಲಾ ಆರೋಗ್ಯ ಮತ್ತು ಸ್ವಾಸ್ಥ್ಯ ಕಾರ್ಯಕ್ರಮದಡಿ 11 ಮಾಡ್ಯೂಲ್ಸ್ :<br>• ಆರೋಗ್ಯಕರ ಬೆಳವಣಿಗೆ<br>• ಭಾವನಾತ್ಮಕ ಯೋಗಕ್ಷೇಮ ಮತ್ತು ಮಾನಸಿಕ ಆರೋಗ್ಯ<br>• ಪರಸ್ಪರ ಸಂಬಂಧಗಳು<br>• ಮೌಲ್ಯಗಳು ಮತ್ತು ಜವಾಬ್ದಾರಿಯುತ ಪೌರತ್ವ<br>• ಲಿಂಗ ಸಮಾನತೆ<br>• ಪೋಷಣೆ ಆರೋಗ್ಯ ಮತ್ತು ನೈರ್ಮಲ್ಯ<br>• ಮಾದಕ ವಸ್ತುಗಳ ದುರ್ಬಳಕೆಯ ತಡೆಗಟ್ಟುವಿಕೆ ಮತ್ತು ನಿರ್ವಹಣೆ<br>• ಆರೋಗ್ಯಕರ ಜೀವನ ಶೈಲಿಯ ಪ್ರಚಾರ<br>• ಸಂತಾನೋತ್ಪತ್ತಿ ಆರೋಗ್ಯ ಮತ್ತು ಎಚ್‌ಐವಿ ತಡೆಗಟ್ಟುವಿಕೆ<br>• ಹಿಂಸೆ ಮತ್ತು ಗಾಯಗಳ ವಿರುದ್ಧ ಸುರಕ್ಷತೆ ಮತ್ತು ಭದ್ರತೆ<br>• ಇಂಟರ್ನೆಟ್ ಗ್ಯಾಜೆಟ್‌ಗಳು ಮತ್ತು ಮಾಧ್ಯಮದ ಸುರಕ್ಷಿತ ಬಳಕೆಯ ಪ್ರಚಾರ ಒಳಗೊಂಡ ಪಠ್ಯ ಕ್ರಮವನ್ನು ಶಾಲಾ ಶಿಕ್ಷಕರಿಗೆ ತರಬೇತಿ ನೀಡಿ ಅವರ ಮುಖಾಂತರ ಮಕ್ಕಳಿಗೆ ನೀಡಲಾಗುತ್ತಿದೆ. **(ಅನುಬಂಧ-2 ರಲ್ಲಿ** ನೀಡಲಾಗಿದೆ.)<br><br>ಶಿಕ್ಷಣ ಇಲಾಖೆಯು ಡಿ.ಎಸ್.ಇ.ಆರ್.ಟಿ ಪೋರ್ಟಲ್‌ನಲ್ಲಿ ಇದನ್ನು ಭಿತ್ತರಿಸಿದೆ.<br><br>ಗಂಭೀರ ಆರೋಗ್ಯ ವಿಚಾರಗಳನ್ನು ಮಕ್ಕಳ ಪಠ್ಯ ಪುಸ್ತಕದಲ್ಲಿ ಸೇರ್ಪಡೆಗೊಳಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ. |

ಸಂಖ್ಯೆ:ಆಕುಕ 144 ಎಸ್‌ಟಿಕ್ಯೂ 2025

**(ದಿನೇಶ್ ಗುಂಡೂರಾವ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು.

ಅನುಬಂಧ-1


# ಆರ್.ಬಿ.ಎಸ್.ಕೆ ಸ್ವಾಸ್ಥ್ಯ ಕಿರಣ

**ಅಧಿಕ ರಕ್ತದೊತ್ತಡದಿಂದ ಬಳಲುತ್ತಿರುವ ಮಕ್ಕಳ ವರದಿ 01/04/2025 to 30/11/2025**

**(ಸರ್ಕಾರಿ ಮತ್ತು ಸರ್ಕಾರಿ ಅನುದಾನಿತ ಶಾಲೆ ಮತ್ತು ಕಾಲೇಜುಗಳು)**

| ಕ್ರ.ಸಂ | ಜಿಲ್ಲೆ | ಒಟ್ಟುಮಕ್ಕಳ ತಪಾಸಣೆ ಸಂಖ್ಯೆ | ಒಟ್ಟು ಅಧಿಕ ರಕ್ತದೊತ್ತಡದಿಂದ ಬಳಲುತ್ತಿರುವ ಮಕ್ಕಳ ಸಂಖ್ಯೆ | ಶೇ ಅಧಿಕ ರಕ್ತದೊತ್ತಡ |
|---|---|---|---|---|
| 1 | ಬಾಗಲಕೋಟೆ | 139993 | 25258 | 18.0 |
| 2 | ಬಳ್ಳಾರಿ | 132692 | 4469 | 3.4 |
| 3 | ಬಿ.ಬಿ.ಎಂ.ಪಿ | 228598 | 13364 | 5.8 |
| 4 | ಬೆಳಗಾವಿ | 528103 | 50940 | 9.6 |
| 5 | ಬೆಂಗಳೂರು ಗ್ರಾ | 70387 | 7983 | 11.3 |
| 6 | ಬೆಂಗಳೂರು ನಗರ | 77621 | 11821 | 15.2 |
| 7 | ಬೀದರ್ | 141998 | 3489 | 2.5 |
| 8 | ಚಾಮರಾಜನಗರ | 70922 | 1707 | 2.4 |
| 9 | ಚಿಕ್ಕಬಳ್ಳಾಪುರ | 77125 | 10805 | 14.0 |
| 10 | ಚಿಕ್ಕಮಗಳುರು | 72172 | 3265 | 4.5 |
| 11 | ಚಿತ್ರದುರ್ಗ | 150111 | 3875 | 2.6 |
| 12 | ದಕ್ಷಿಣ ಕನ್ನಡ | 151442 | 14512 | 9.6 |
| 13 | ದಾವಣಗೆರೆ | 122497 | 38355 | 31.3 |
| 14 | ಧಾರವಾಡ | 203937 | 13727 | 6.7 |
| 15 | ಗದಗ | 108537 | 13941 | 12.8 |
| 16 | ಹಾಸನ | 111102 | 17212 | 15.5 |
| 17 | ಹಾವೇರಿ | 160329 | 11112 | 6.9 |
| 18 | ಕಲಬುರಗಿ | 250002 | 45368 | 18.1 |
| 19 | ಕೊಡಗು | 33482 | 708 | 2.1 |
| 20 | ಕೋಲಾರ | 93036 | 3017 | 3.2 |
| 21 | ಕೊಪ್ಪಳ | 162171 | 27364 | 16.9 |
| 22 | ಮಂಡ್ಯ | 111421 | 33345 | 29.9 |
| 23 | ಮೈಸೂರು | 178566 | 28466 | 15.9 |
| 24 | ರಾಯಚೂರು | 188634 | 48598 | 25.8 |
| 25 | ರಾಮನಗರ | 67669 | 1297 | 1.9 |
| 26 | ಶಿವಮೊಗ್ಗ | 129585 | 15226 | 11.7 |
| 27 | ತುಮಕೂರು | 190460 | 35952 | 18.9 |
| 28 | ಉಡುಪಿ | 75956 | 3758 | 4.9 |
| 29 | ಉತ್ತರ ಕನ್ನಡ | 133788 | 16751 | 12.5 |
| 30 | ವಿಜಯನಗರ | 143633 | 12265 | 8.5 |
| 31 | ವಿಜಯಪುರ | 208902 | 53073 | 25.4 |
| 32 | ಯಾದಗಿರಿ | 112497 | 6237 | 5.5 |
| | **ಒಟ್ಟು** | **4627368** | **577260** | **12.5** |

## ಅನುಬಂಧ-2


11 Themes Under Ayushman Bharat School Health & Wellness Programme
Growing Up Healthy
Emotional Well-being and Mental Health
Interpersonal Relationships
Values and Responsible Citizenship
Gender Equality
Nutrition, Health and Sanitation
Prevention and Management of Substance Misuse
Promotion of Healthy Life Style
Reproductive Health and HIV Prevention
Safety and Security Against Violence and Injuries
Promotion of Safe Use of Internet, Gadgets and Media
SAY NO TO DRUGS
NATIONAL HEALTH MISSION
RKSK